ಸೋಂಪನ ಈ ಮುಂಚಿನ ಎಲ್ಲಾ ಕಥೆ, ಮಾಹಿತಿ, ವಿವರ, ದೈವದ ಲಕ್ಷಣ, ಅದರ ವೇಗ, ವ್ಯಾಪ್ತಿ, ಉದ್ದೇಶವನ್ನು ಕಟ್ಟೆಯಲ್ಲಿ ಕೂತು ಏದುಸಿರು ಬಿಡುತ್ತಾ ನಾವೆಲ್ಲಾ ಒಟ್ಟಾಗಿ ಅನುಮೋದಿಸಲೇ ಬೇಕಾಯಿತು.

ಒಂದು ರೂಪಾಯಿಯ ಟಿಕೇಟು ತಗೊಂಡು, 'ದೇವುಪೂಂಜ ಪ್ರತಾಪ' ಆಟ ನೋಡಲು ನೆಲದಲ್ಲಿ ಕೂತಿದ್ದೇವೆ. ಸಾಕ್ಷಾತ್ ನಮಗೆ ಕನ್ನಡ, ಲೆಕ್ಕ, ವಿಜ್ಞಾನ, ಎಲ್ಲವನ್ನೂ ಪ್ರೀತಿಯಿಂದ ಧಾರೆ ಎರೆಯುವ, ಮಧ್ಯಾಹ್ನ ಪ್ರೀತಿಯಿಂದಲೇ ಸಜ್ಜಿಗೆ ಬಡಿಸುವ ಏಕೋಪಾಧ್ಯಾಯ ಆಳ್ವ ಮೇಷ್ಟ್ರು ದೇವುಪೂಂಜನಾಗಿ ರಂಗಸ್ಥಳಕ್ಕೆ ಬಂದು ನಿಂತಿದ್ದಾರೆ. ನಮ್ಮ ಯಾರೊಬ್ಬರ ದಮ್ಮೂ ಇಲ್ಲ. ಶಾಂತಣ್ಣನ ಚಪ್ಪಾಳೆಯೂ ಇಲ್ಲ. ಸೋಂಪನ ಸಿಳ್ಳೂ ಇಲ್ಲ. ಪೆರ್ಚಿಕಟ್ಟೆ ಹೋದ ನಾವು ಆಟ ಮುಗಿದು ಬೆಳಗಾದ ಮೇಲೆ ತಿರುಗಿ ದೇರ್ಲಕ್ಕೆ ಹೋಗುವುದು ಹೇಗೆ ಎಂಬ ವ್ಯಥೆಯಲ್ಲೇ ರಾತ್ರಿಯಿಡೀ ಕಾಲ ಕಳೆದೆವು. ಆಟ ಮುಗಿದು ಇನ್ನೇನು ಊರಹಾದಿಯ ಗುಡ್ಡ ಏರಬೇಕೆನ್ನುವಾಗ ಅಲ್ಲೇ ಕಣ್ಣ ಚಹ ಕುಡಿಯುತ್ತಿದ್ದ ನಾರ್ಣಣ್ಣ ಕಂಡರು. "ಆಟ ನೋಡಿದ್ರ, ನಿದ್ದೆ ಮಾಡಿದ್ರಾ?" ನಾರ್ಣಣ್ಣನ ಪ್ರಶ್ನೆಗೆ ಉತ್ತರ ಕೊಟ್ಟ ನೆನಪಿಲ್ಲ. ನಾವೂ ನಿಮ್ಮೊಟ್ಟಿಗೇ ಬರುತ್ತೇವೆ ಎಂದು ಗುಂಪಾಗಿ ಅವರ ಹಿಂದೆಯೇ ಹೊರಟೆವು. ರಾತ್ರಿ ರಬ್ಬರ್ ತೋಟದಲ್ಲಿ ಭೂತ ಕಂಡ ಕಥೆಯನ್ನು ಅವರಲ್ಲಿ ನಾವು ಹೇಳಲೇ ಇಲ್ಲ.

ಆಟ, ಬಯಲಾಟ, ನಾಟಕ ಎಷ್ಟೇ ಸುಖ, ಖುಶಿಯಾದ್ರು ನನಗೆ ಹಿಂಸೆಯಾಗುವುದು ಮರುದಿನದ ನಿದ್ದೆ. ಬೆಳಗ್ಗೆ ಮನೆಗೆ ಬಂದು ಏನಾದ್ರು ತಿಂದು ಕುಡಿದು ಮಲಗಿದ್ರೆ ಮಧ್ಯಾಹ್ನವೋ ಸಂಜೆಯೋ ರಾತ್ರಿಯೋ ಒಂದೂ ಗೊತ್ತಾಗುತ್ತಿರಲಿಲ್ಲ. ಅರೆಬರೆ ಮಂಪರಿನಲ್ಲಿ ವಾರ, ದಿನ ಎಲ್ಲಾ ಮರೆತು ಹೋಗುವುದಿತ್ತು. ಮೇಷ್ಟ್ರ ದೇವುಪೂಂಜ ನೋಡಿ ಬಂದ ಮೇಲೆ ಮರುದಿನ ಸ್ವಲ್ಪ ಜ್ವರವೂ ಬಂತು. ರಾತ್ರಿ ಅಮ್ಮ ಮುಖಕ್ಕೆ ನೀರು ಹಾಕಿ ಎಬ್ಬಿಸಿ ತಿನ್ನಲು ಹಲಸಿನಹಣ್ಣು ಕೊಟ್ರು. ಶಾಂತಣ್ಣ ಇನ್ನೂ ಎದ್ದಿರಲಿಲ್ಲ.

★★★

ರಬ್ಬರ್ ಭೂತದ ಅಸಲಿಯತ್ತು ಗೊತ್ತಾದುದು ನಾನು ಕಾಲೇಜು ಓದುವ ಹೊತ್ತಿಗೆ. ಅದೇ ತೋಟದ ನಡುವೆ, ಅದೇ ಅಜ್ಜಿಕಲ್ಲು ಹಾದಿಯಲ್ಲೇ ನಾನು ದಿನಾ ನಡೆದು

